# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

**ಎಸ್‌ಸಿ. 110/2017**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಶ್ರೀ ಲಿಂಗೇಶ್ | | ಪ್ರಮಾಣ ಮಾಡಿಸಿದ ದಿನಾಂಕಃ |
| ತಂದೆ/ಗಂಡನ ಹೆಸರು | ಃ ಶ್ರೀ ತಿಬ್ಬಯ್ಯ | | 07.02.2023 |
| ವಯಸ್ಸು | ಃ 49 ವರ್ಷ | | |
| ವೃತ್ತಿ | ಃ ರಿಯಲ್ ಎಸ್ಟೇಟ್ | ಪ್ರಾ.ಸಾ. | ಃ 26 |
| ವಾಸಸ್ಥಳ | ಃ ಮೈಸೂರು | ಚಾ.ಸಾ. | ಃ 45 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ಚಾ.ಸಾ-*46* ಪರಿಚಯ ಇದೆ. ನನ್ನ ಬಳಿ ಸ್ಯಾಂಟ್ರೋ ಕಾರ್ ಇತ್ತು ಸಂಖ್ಯೆ ನೆನಪಿಲ್ಲ. ಅಂದಾಜು *4-5* ವರ್ಷಗಳ ಹಿಂದೆ ಸದರಿ ಕಾರನ್ನು ಚಾ.ಸಾ-*46* ಅವರ ಮೂಲಕ *1* ಲಕ್ಷ ರೂಪಾಯಿಗೆ ಮಾರಾಟ ಮಾಡಿ ದಾಖಲೆಗಳಿಗೆ ಸಹಿ ಮಾಡಿ ಕೊಟ್ಟಿದ್ದೇನೆ. ಆರ್.ಸಿ ಬದಲಾವಣೆ ಆದ ಬಗ್ಗೆ ವಿಚಾರಣೆ ಮಾಡಿಲ್ಲ. ನಾನು ಕಾರನ್ನು ಮಾರಾಟ ಮಾಡಿದ *4-5* ತಿಂಗಳ ನಂತರ ಒಂಟಿಕೊಪ್ಪಲ್ ಪೊ.ಠಾಣೆಯವರು ನನ್ನನ್ನು ಕಾರಿನ ಸಂಬಂದ ಕರೆಸಿದ್ದರು. ದಾಖಲೆ ಬದಲಾವಣೆ ಆದ ಬಗ್ಗೆ ತಿಳಿದಿಲ್ಲ. ಚಾ.ಸಾ-*46* ಅವರು ಕಾರನ್ನು ಯಾರಿಗೆ ಮಾರಾಟ ಮಾಡಿದ್ದರು ಎಂದು ಗೊತ್ತಿಲ್ಲ. ಒಂಟಿಕೊಪ್ಪಲ್ ಪೊ.ಠಾಣೆಯವರು ನನ್ನನ್ನು ಕರೆಸಿದ ಕಾರಣ ಗೊತ್ತಿಲ್ಲ. ಪೊಲೀಸ್ ಅಧಿಕಾರಿಗೆ ನಾನು ಕಾರನ್ನು ಚಾ.ಸಾ-*46* ಅವರಿಗೆ ಮಾರಾಟ ಮಾಡಿದ ಬಗ್ಗೆ ಹೇಳಿದ್ದೇನೆ. ನಂತರ ಸದರಿ ಕಾರಿನ ಬಗ್ಗೆ ನಾನು ನ್ಯಾಯಾಧೀಶರ ಸಮಕ್ಷಮ ಹೇಳಿಕೆ ಕೊಟ್ಟಿದ್ದೇನೆ.

***<u>ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.</u>***

***<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-</u>***

*2.* ಸಂತೋಷ್ ಅವರು ನನ್ನಿಂದ ನನ್ನ ಕಾರನ್ನು ನೇರವಾಗಿ ಮಾರಾಟ ಮಾಡಿಸಿದ್ದರು ಎಂದರೆ ಸರಿಯಲ್ಲ. ಅಂದು ನನಗೆ ನೆನಪು ಇದ್ದ ವಿಚಾರವನ್ನು ಮತ್ತು ಕಾರು ಮಾರಾಟ ಮಾಡಿದ ಬಗ್ಗೆ ನ್ಯಾಯಾಧೀಶರ ಸಮಕ್ಷಮ ಮತ್ತು ಪೊಲೀಸರ ಸಮಕ್ಷಮ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿ. *1* ನೇ ಆರೋಪಿಯನ್ನು ಮೊಬೈಲ್ ವಿ.ಸಿ ಮೂಲಕ ತೋರಿಸಿದ್ದು ಸದರಿ ಆರೋಪಿಗೆ ನಾನು ಕಾರನ್ನು ಮಾರಾಟ ಮಾಡಿದ್ದೇನೆ ಎಂದರೆ ಸರಿಯಲ್ಲ. *1* ನೇ ಆರೋಪಿ ಹೇಮಂತ್ ಅವರು ಚಾ.ಸಾ*-46* ಅವರ ಮೂಲಕ ನೇರವಾಗಿ ನನ್ನ ಸಮಕ್ಷಮ ನನ್ನ ಕಾರನ್ನು ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನಿ.ಪಿ*-106* ನನ್ನ ಹೇಳಿಕೆಯಲ್ಲಿ ನಿ.ಪಿ*-106(*ಎ*)* ನನ್ನ ಸಹಿ ಇದೆ. ನನಗೆ ಅವಶ್ಯಕತೆ ಇದ್ದ ಕಾರಣ ಚಾ.ಸಾ*-46* ಅವರ ಮೂಲಕ *1* ನೇ ಆರೋಪಿಗೆ *1* ಲಕ್ಷ ರೂಪಾಯಿಗೆ ನಾನು ಕಾರನ್ನು ಮಾರಾಟ ಮಾಡಿದ ಬಗ್ಗೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಕಾರಿನ ದಾಖಲೆಗಳನ್ನು ಚಾ.ಸಾ*-46* ಅವರು ಬದಲಾವಣೆ ಮಾಡಿಸಿರಲಿಲ್ಲ ಎಂದು ನಾನು ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

*3.* ನನಗೆ ಹೇಳಿಕೆ ಕೊಡಲು ಯಾರ ಬಲವಂತ ಮತ್ತು ಒತ್ತಾಯ ಇರಲಿಲ್ಲ. ನ್ಯಾಯಾಧೀಶರ ಸಮಕ್ಷಮ ಹೇಳಿಕೆ ಕೊಡುವ ಮೊದಲು ನನಗೆ ಈಗ ಓದಿ ಹೇಳಿದಂತೆ ನಿ.ಪಿ*-107* ರಂತೆ ನಾನು ಕಾರನ್ನು ಚಾ.ಸಾ*-46* ಅವರ ಮೂಲಕ *1*ನೇ ಆರೋಪಿಗೆ ಮಾರಾಟ ಮಾಡಿದ ಬಗ್ಗೆ ತನಿಖಾಧಿಕಾರಿ ಸಮಕ್ಷಮ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ*-106*

ಮತ್ತು *107* ರಂತೆ ನಾನು  ನ್ಯಾಯಾಧೀಶರ ಸಮಕ್ಷಮ ಮತ್ತು ತನಿಖಾಧಿಕಾರಿ ಸಮಕ್ಷಮ ಹೇಳಿಕೆ ಕೊಟ್ಟಿದ್ದರು ಸಹ *1* ನೇ ಆರೋಪಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಃ 1 ಮತ್ತು 2 ಆರೋಪಿ ಪರ ವಕೀಲರಾದ ಶ್ರೀ ವಿ.ಬಿ.ಎನ್ ರವರಿಂದಃ-**

*4.* ದಿಃ *30.12.2016* ರಂದು ನನ್ನನ್ನು ಮೊದಲ ಬಾರಿ ಪೊ.ಠಾಣೆಗೆ ಕರೆಸಿ ಕಾರಿನ ಬಗ್ಗೆ ಹೇಳಿಕೆ ಪಡೆದಿದ್ದಾರೆ ಎಂದರೆ ಸರಿ.  ಅಂದು ನನಗೆ ಇದ್ದ ಮಾಹಿತಿಯನ್ನು ತನಿಖಾಧಿಕಾರಿಗೆ ಹೇಳಿದ್ದು ತನಿಖಾಧಿಕಾರಿ ಹೇಳಿಕೆಯನ್ನು ಪಡೆದು ನನಗೆ ಓದಿ ಹೇಳಿದ್ದಾರೆ ಎಂದರೆ ಸರಿ.  ಹೇಳಿಕೆ ನೀಡಿದ ಸುಮಾರು *2* ತಿಂಗಳ ನಂತರ ತನಿಖಾಧಿಕಾರಿ ನನ್ನನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಹೋಗಿದ್ದರು ಎಂದರೆ ಸರಿ.  ನ್ಯಾಯಾಲಯಕ್ಕೆ ಹೋಗುವ ಮೊದಲು ನಾನು ಯಾವ ರೀತಿ ಹೇಳಿಕೆ ನೀಡಬೇಕು ಎಂದು ನನಗೆ ತಿಳುವಳಿಕೆ ಕೊಟ್ಟಿದ್ದರು ಎಂದರೆ ಸರಿ.  ಪೊಲೀಸರ ಹೇಳಿಕೆಯಂತೆ ನಾನು ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸಾಕ್ಷಿದಾರರು ತನಗೆ ಇದ್ದ ಮಾಹಿತಿಯನ್ನು ಹೇಳಿರುವುದಾಗಿ ನುಡಿಯುತ್ತಾರೆ.  ನಿ.ಪಿ-*106* ರಲ್ಲಿ ಹೇಮಂತ್ ಎಂದು ಹೇಳಿದ್ದು ಸದರಿ ವ್ಯಕ್ತಿ ಯಾರು ಎಂದು ಹೇಳಲು ಬರುವುದಿಲ್ಲ.

**ಮರು ವಿಚಾರಣೆಃ- ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು